

ಮನದಲ್ಲಿ ಉಳಿದುಕೊಳ್ಳಲು ಸಾಧ್ಯ? ಒಂದು ಗಳಿಗೆಯ ಮೋಡ, ಮತ್ತೊಂದು ಗಳಿಗೆಗೆ ಬಿಸಿಲು. ಬಂದಾಗಿನ ಆ ಆಕರ್ಷಣೆ ಕ್ರಮೇಣ ಕರಗತೊಡಗುತ್ತದೆ. ವಸ್ತುವೊಂದು ಹಸಿರಾಗಿದ್ದಾಗಿನ ಆ ಸೌಂದರ್ಯವೇ ಬೇರೆ. ಈಗ ಅದೊಂದು ಒಣಗಿದ ತರಗೆಲೆ. 'ಉದುರಿದೀ ತರಗಿಂದ ಉಪಯೋಗವೇನಿನ್ನು? ಹಾಕು ಬೆಂಕಿಯನವನು ರಾಸಿಗೈದು' ಎನ್ನುತ್ತ ಹಳೆಯ ಗಂಟಿಗೆ ಚರಮಗೀತೆ ಹಾಡಿಯಾಗಿರುತ್ತದೆ.

ಹಳೆಯದರ ಮುಂದೆ ಹೊಸದೆಲ್ಲವೂ ಸುಂದರಾತಿ ಸುಂದರವೇ! ಸೊಗಸಾದ ಸವಲತ್ತುಗಳಿಗೆ ನಾವೆಲ್ಲ ಸುಲಭದ ತುತ್ತುಗಳು, ಮತ್ತೆ ತೊತ್ತುಗಳು! ಅದು ಪ್ರತಿ ಮನುಷ್ಯನ ರಕ್ತಗತ ಖಯಾಲಿಯಾಗಿರಬಹುದು. ಮುರುಕು ಧರ್ಮಶಾಲೆಯಲ್ಲಿ ಮಲಗಿದ ತಿರುಕನ ಕನಸಿನ ಕಥೆ ಗೊತ್ತಲ್ಲ. ತನ್ನ ಬಳಿ ಇರುವುದು ಹಳೆಯ ಗಂಟು. ಅದರಲ್ಲಿರೋದು ಅವರಿವರಿಂದ ಬೇಡಿತಂದ ವಸ್ತುಗಳು. ಆದರೆ ಈಗದು ಬೇಡದ ಗಂಟು ಅವನಿಗೆ. ಅರಮನೆಯ ನೆಂಟಸ್ತನದ ಕನಸು ಕಾಣುತ್ತಾನೆ. ರಾಜಕುವರಿಯ ಕೈಹಿಡಿಯುತ್ತಾನೆ. ಕನವರಿಸುತ್ತ ಸುಖಾನುಭವ ಅನುಭವಿಸುತ್ತಾನೆ. ಮಧುರಚೆನ್ನರು ಹೇಳುವಂತೆ: 'ಹಗಲುಗನಸಿನ ಸವಿಯು ಇರುಳುಗನಸಿಗೆಬಹುದೆ? ಇರುಳಿನದು ಇಲ್ಲದ ಸಂತೆ ಕಾಣೋ!'

ತಿರುಕನದು ಇರುಳಗನಸು. ಆದರೆ ನಮ್ಮಲ್ಲಿ ಬಹಳಷ್ಟು ಜನ ಹಗಲುಗನಸಿನವರು. ವಾಸ್ತವದ ಅರಿವು ಇದ್ದೂ, ಕನಸಿನ ಲೋಕದಲ್ಲಿ ಓಲಾಡುವವರು. ಹೊಸ ನಂಟಿನ ರಾಜಾಕರ್ಷಣೆಯ ಮುಂದೆ, ಹಳೆಯ ಗಂಟು ಗೌಣವಾಗಿಬಿಡುತ್ತದೆ. 'ನಾವು ಹಳೆಯ ಆಭರಣಗಳನ್ನು ಲಕಲಕ ಹೊಳೆಯುವಂತೆ ಮಾಡುತ್ತೇವೆ' ಎಂದು ಹೇಳುತ್ತಾ, ಅಸಲಿ ಬಂಗಾರದ ಬದಲಿಗೆ ಕಾಗೆಬಂಗಾರ ಕೊಟ್ಟು, ಕೈಕೊಡುವ ಚಾಣಾಕ್ಷರಿದ್ದಾರೆ. ಮಾರ್ಕೆಟ್‌ನ ಕೆಲ ಆಫರ್‌ಗಳನ್ನು ಗಮನಿಸಿದ್ದೀರಾ? ಹಳೆಯದನ್ನು ಬದಲಿಸಿ ಹೊಸದನ್ನು ಪಡೆಯಿರಿ ಎಂಬ ಕರೆಗೆ, ನಮ್ಮಲ್ಲಿನ ಹಳೆಯ ಗಂಟುಗಳು ಹೊಸ ನೆಂಟರಾಗಿ ರೂಪಾಂತರವಾಗುತ್ತವೆ. ಹೊಸ ಡಿಜೈನ್ ಸೀರೆಗೆ ಮನಸೋಲದ ನೀರೆಯರುಂಟೆ? 'ಮುಂದೇನೆ? ಸಖಿ ಮುಂದೇನೆ? ರೂಪ ಗುಣಕೆ ಮೆಚ್ಚಿ ಬಂದೆನೇ' ಎನ್ನುತ್ತ ಹೊಸತನಕ್ಕೆ ಕಣ್ಣರಳಿಸುತ್ತಾರೆ. ಹೊಸ ನೆಂಟ ಬರುತ್ತಿದ್ದಂತೆಯೇ, ಹಳೆಯ ಗಂಟಿನೊಂದಿಗಿನ ನೀರೆಯರ ಸಖ್ಯದ ಆಖ್ಯಾನ ಮುಗಿದೇಹೋಗುತ್ತದೆ.

ಅಂದಚೆಂದದ ಹೊಸ ಹೊಸ ಮೊಬೈಲ್ ಸೆಟ್‌ಗಳನ್ನು, ಲ್ಯಾಪ್ ಟಾಪ್‌ಗಳನ್ನು, ಕಣ್ಣು ಕುಕ್ಕುವ ಆಕರ್ಷಕ ವಿನ್ಯಾಸದ ವಾಹನಗಳನ್ನು ಕಂಡಾಗೆಲ್ಲ, 'ಛೇ, ಅವಸರ ಮಾಡಿ ಕೆಟ್ಟೆ. ಇನ್ನೊಂದಿಷ್ಟು ತಡೆದಿದ್ದರೆ, ಇದಕ್ಕಿಂತಲೂ ಉತ್ತಮ ಮಾಡೆಲ್ ಸಿಗುತ್ತಿತ್ತು. ಮದುವೆಯ ವಿಷಯದಲ್ಲೂ ಹೀಗೆಯೇ ಆಗಿಹೋಯ್ತು' ಎಂದು ಪೇಚಾಡುವ ಗೃಹಸ್ಥರು ಎಷ್ಟೋ ಜನ!

ತೊಡುವ ಬಟ್ಟೆಯ ಫ್ಯಾಷನ್ ದಿನದಿನಕ್ಕೆ ಬದಲಾದರೇನಂತೆ, ಸಂತೋಷದಿಂದ ಬರ ಮಾಡಿಕೊಳ್ಳುತ್ತೇವೆ. ಆದರೆ, ತಲೆಗೂದಲ ಸ್ಟೈಲ್ ಹಾಗಲ್ಲವಲ್ಲ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ತಲೆಗೂದಲ ಸ್ಟೈಲ್ ಇಂದು ನಮ್ಮ ಕೇಶಿರಾಜರ ತಲೆ ಕೆಡಿಸಿಲ್ಲವೆ? ಒಮ್ಮೆ ಮಾಡಿಸಿಕೊಂಡ ಹೇರ್ ಸ್ಟೈಲ್ ಹಾಗೆಲ್ಲ ದಿನ ದಿನಕ್ಕೆ ಬದಲಾಯಿಸಲು ಸಾಧ್ಯವೇ? ಹೊಸಗೂದಲು ಹುಟ್ಟಿಬರುವವರೆಗೆ, ಕೊನೇಪಕ್ಷ ಒಂದು ತಿಂಗಳಾದರೂ ಹುಡುಗರು ಕಾಯಲೇಬೇಕು. ದಿಢೀರನೆ ಹೋಗಿ, 'ನಿನ್ನೆಯ ಈ ಸ್ಟೈಲ್ ಬ್ಯಾಡಾರಿ, ಇವತ್ತಿನ ಹೊಸ ಸ್ಟೈಲ್ ಬೇಕು' ಅಂದರೆ ಪಾಪ ಆ ಕ್ಷೌರಿಕನಾದರೂ ಏನುಮಾಡಬೇಕು? 'ನೋಡ್ರಿ ಒಂದು ತಿಂಗಳಾದರೂ ಸಹಿಸಿಕೊಳ್ಳಬೇಕು' ಕ್ಷೌರಿಕನ ಮಾತಿಗೆ ತಲೆತಗ್ಗಿಸದಿದ್ದರೆ ನಡೆದೀತೆ?

ಫ್ಯಾಷನ್ ಜಗತ್ತು ಈಗೀಗ ಎಷ್ಟು ವೇಗವಾಗಿ ಓಡುತ್ತಿದೆ ಅಂತೀರಿ? ಆ ದಿನಗಳಲ್ಲಿ ಪರಮನೆಂಟರಂತಿದ್ದ ಟೈಪ್‌ರೈಟರ್‌ಗಳು, ಗ್ರಾಮಾಫೋನ್‌ಗಳು, ರೀಲ್ ಕ್ಯಾಮೆರಾಗಳು, ಅದಾದ ಮೇಲಿನ ಡಿಜಿಟಲ್ ಕ್ಯಾಮೆರಾಗಳು, ಟೇಪ್‌ರಿಕಾರ್ಡರ್‌ಗಳು, ನಂತರ ಬಂದ ಪೇಜರ್‌ಗಳು, ಲ್ಯಾಂಡ್‌ಫೋನ್‌ಗಳು, ಅವುಗಳ ಟ್ರಂಕ್‌ಕಾಲ್‌ಗಳು, ಟೆಲಿಗ್ರಾಮ್‌ಗಳು ಇನ್ನೂ ಎಷ್ಟೆಷ್ಟೋ ತಮ್ಮ ನೆಂಟಸ್ತಿಕೆ ಕಳೆದುಕೊಂಡು ಹೋಗಿವೆ. ಗಾಜಿನ ಜಾಗದಲ್ಲಿ ಫೈಬರ್ ಬಂದು ಕುಂತಿದೆ. ಕಂಚು, ಹಿತ್ತಾಳೆ, ತಾಮ್ರದ ಪಾತ್ರೆಪಗಡೆಗಳನ್ನು ಹಿಂದಕ್ಕೆ ತಳ್ಳಿವೆ. ಸ್ಟೇನ್‌ಲೆಸ್‌ಸ್ಟೀಲ್, ಪ್ಲಾಸ್ಟಿಕ್ ಪಾತ್ರೆಗಳದೇ ಇಂದು ಪ್ರಧಾನ ಪಾತ್ರ. 'ಬರುವುದೇನೆ ನೆಪ್ಪಿಗೆ, ನಮ್ಮ ನಿಮ್ಮ ಒಪ್ಪಿಗೆ, ಎಲ್ಲೊ ಏನೊ ನೋಡಿದೆ, ಹಾಗೆ ಬಂದು